ಕ್ರ. ಸಂ.	ವಾಹನಗಳ ಮಾದರಿ	ವಾಹನಗಳ ಸಂಖ್ಯೆ
1	ಕರ್ನಾಟಕ ಸಾರಿಗೆ	378
2	ಗ್ರಾಮಾಂತರ ಸಾರಿಗೆ	53
3	ನಗರ ಸಾರಿಗೆ (ಜೆ.ಎನ್.ಎನ್.ಯೂ.ಆರ್.ಎಂ) ಲೇಲ್ಯಾಂಡ ನಗರ ಸಾರಿಗೆ–79 ಟಾಟಾ ನಗರ ಸಾರಿಗೆ–41 ವೋಲ್ವೋ ನಗರ ಸಾರಿಗೆ–30	150
4	ರಾಜಹಂಸ	36
5	ವೋಲ್ವೋ ಐರಾವತ	60
6	ಕರೋನಾ ಸ್ಲೀಪರ್	8
	ಒಟ್ಟು	**685**

ಆ) 2009–10ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ ರೂ.45 ಕೋಟಿ ಒದಗಿಸಲಾಗಿದೆ. ಈ ಪೈಕಿ ಇದುವರೆವಿಗೂ ಸುಮಾರು 33.00 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿ ವೆಚ್ಚ ಮಾಡಲಾಗಿದೆ.

ಇ) 2009–10ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಯಡಿಯಲ್ಲಿ 2500.00 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು, ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ.

ಮಹಿಳಾ ಅಭಿವೃದ್ಧಿ ನಿಗಮ ಸ್ಥಾಪನೆ

893 (1416) ಶ್ರೀ ಮಹೇಶ್ ಎಸ್. ಆರ್. (ಕೃಷ್ಣರಾಜನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮ ಯಾವಾಗ ಸ್ಥಾಪನೆಯಾಯಿತು?

ಆ) ಈ ನಿಗಮವು ಮಹಿಳೆಯರ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ?

ಇ) ಈ ನಿಗಮವು ಜಿಲ್ಲಾ ಕೇಂದ್ರಗಳಲ್ಲಿ ಸ್ವಂತ ಕಛೇರಿಯನ್ನು ಹೊಂದಿದೆಯೇ?

ಈ) ಈ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು);

ಉ) ನಿಗಮದ ಅಭಿವೃದ್ಧಿ ನಿರೀಕ್ಷಕರಿಗೆ ನೀಡುತ್ತಿರುವ ವೇತನ ಎಷ್ಟು; ಅಭಿವೃದ್ಧಿ ನಿರೀಕ್ಷಕರಿಗೆ ನೀಡುತ್ತಿರುವ ವೇತನದಲ್ಲಿ ತಾರತಮ್ಯವಾಗಿರುವುದು ನಿಜವೇ;

ಊ) ನಿಗಮದಲ್ಲಿ ಜಿಲ್ಲಾವಾರು ಕಾರ್ಯ ನಿರ್ವಹಿಸಲು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಬೇರೆ ಎಲ್ಲಾ ಇಲಾಖೆಗಳ ನಿಗಮಗಳಿಗೂ ಜಿಲ್ಲಾ ಕೇಂದ್ರಗಳಲ್ಲಿ ಕಛೇರಿಗಳಿದ್ದು, ಈ ನಿಗಮ ಮಾತ್ರ ಸ್ವಂತ ಕಛೇರಿ ಹೊಂದೇ ಇರಲು ಕಾರಣಗಳೇನು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 1987 ರಲ್ಲಿ ಸ್ಥಾಪನೆಯಾಯಿತು.

ಆ) ನಿಗಮವು ಮಹಿಳೆಯರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

1) ಉದ್ಯೋಗಿನಿ
2) ಆಸರೆ
3) ಮಹಿಳಾ ತರಬೇತಿ ಯೋಜನೆ
4) ರಾಜ್ಯ ಸಂಪನ್ಮೂಲ ಕೇಂದ್ರ (ಮಹಿಳಾ ಸ್ವಯಂ ಉದ್ಯೋಗ ಕೇಂದ್ರ ನಿರ್ವಹಣೆ
5) ಮಾರುಕಟ್ಟೆ ನೆರವು ಯೋಜನೆ
6) ದೇವದಾಸಿ ಪುನರ್ವಸತಿ ಯೋಜನೆ ಹಾಗೂ ಮಾಸಾಶನ ಯೋಜನೆ
7) ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆ

ಇ) ಇಲ್ಲ.

ಈ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ 71 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ನಿಗಮದ ಕೇಂದ್ರ ಕಛೇರಿಯಲ್ಲಿ 33 ಅಧೀಕಾರಿ/ ಸಿಬ್ಬಂದಿ ವರ್ಗದವರು ಮತ್ತು ಜಿಲಾ ಕಛೇರಿಗಳಲ್ಲಿ 13 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಉ) ಅಭಿವೃದ್ಧಿ ನಿರೀಕ್ಷಕರಿಗೆ ವೇತನ ಶ್ರೇಣಿ 8825–16000 ರಲ್ಲಿ ವೇತನ ನೀಡಲಾಗುತ್ತಿದ್ದು, ಇದನ್ನು ಪರಿಷ್ಕರಣೆ ಮಾಡಲು ಪರಿಶೀಲಿಸ ಲಾಗುತ್ತಿದೆ.

ಹೌದು.

ಊ) ಇಲ್ಲ.

ಋ) ಉದ್ಭವಿಸುವುದಿಲ್ಲ.

ಅನುಬಂಧ

ಜಿಲ್ಲಾವಾರು ಮಂಜೂರಾದ / ಭರ್ತಿ ಮಾಡಲಾದ ಹುದ್ದೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಮಂಜೂರಾದ ಹುದ್ದೆಯ ಸಂಖ್ಯೆ	ಭರ್ತಿ ಮಾಡಲಾದ ಹುದ್ದೆಯ ಸಂಖ್ಯೆ	ಖಾಲಿ ಇರುವ ಹುದ್ದೆಯ ಸಂಖ್ಯೆ
1	ಬೆಂಗಳೂರು (ನ)	1	1	0
	ಪ್ರಧಾನ ಕಛೇರಿ	44	33	11
2	ಬೆಂಗಳೂರು (ಗ್ರಾ)	1	1	0
3	ರಾಮನಗರ	0	0	0
4	ಚಿತ್ರದುರ್ಗ	1	1	0
5	ದಾವಣಗೆರೆ	1	1	0
6	ಕೋಲಾರ	1	1	0
7	ಚಿಕ್ಕಬಳ್ಳಾಪುರ	0	0	0
8	ಶಿವಮೊಗ್ಗ	1	0	1
9	ತುಮಕೂರು	1	1	0
10	ಚಿಕ್ಕಮಗಳೂರು	1	1	0

11	ದಕ್ಷಿಣ ಕನ್ನಡ	1	1	0
12	ಉಡುಪಿ	1	0	1
13	ಹಾಸನ	1	0	1
14	ಕೊಡಗು	1	0	1
15	ಮಂಡ್ಯ	1	1	0
16	ಮೈಸೂರು	1	0	1
17	ಚಾಮರಾಜನಗರ	1	0	1
18	ಉತ್ತರ ಕನ್ನಡ	1	0	1
19	ಬೆಳಗಾವಿ	1	0	1
20	ಬಿಜಾಪುರ	1	1	0
21	ಬಾಗಲಕೋಟೆ	1	0	1
22	ಧಾರವಾಡ	1	0	1
23	ಗದಗ	1	0	1
24	ಹಾವೇರಿ	1	0	1
25	ಬಳ್ಳಾರಿ	1	0	1
26	ಬೀದರ್	1	1	0
27	ಗುಲ್ಬರ್ಗಾ	1	1	0
28	ರಾಯಚೂರು	1	0	1
29	ಕೊಪ್ಪಳ	1	1	0
	ಒಟ್ಟು	71	46	25

ಕೇಂದ್ರ ಸರ್ಕಾರದ ಪರಿಷ್ಕೃತ ಯೋಜನೆಗಳಿಗೆ ಅನುದಾನ ಪಡೆದಿರುವುದು

894 (1028) ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ (2007–08, 2008–09 ಮತ್ತು 2009–10) ಯಾವ ಯಾವ ಯೋಜನೆಗಳನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದೆ;

ಆ) ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಈ ಯೋಜನೆಗಳಿಗೆ ಎಷ್ಟು ಹಣವನ್ನು ಒದಗಿಸಲು ಆಯೋಜಿಸಲಾಗಿತ್ತು;